# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - WEDNESDAY 5-4-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ರಫ್ತು ಹೆಚ್ಚಳದಿಂದ ಮಲೇಶಿಯಾದ ಪಾಮೆಣ್ಣೆ ದಾಸ್ತಾನು 9 ತಿಂಗಳ ಕನಿಷ್ಠ ಮಟ್ಟಕ್ಕಿಳಿಕೆಯ ಸಾಧ್ಯತೆ

ಮಲೇಶಿಯಾದ ಪಾಮೆಣ್ಣೆ ದಾಸ್ತಾನು ರಫ್ತು ಹೆಚ್ಚಳ, ಉತ್ಪಾದನೆ ಇಳಿಕೆಯಿಂದ 9 ತಿಂಗಳ ಕನಿಷ್ಠ ಮಟ್ಟ ಹಾಗೂ ಮಾರ್ಚ್ ತಿಂಗಳಲ್ಲಿ 2 ವರ್ಷದ ಕನಿಷ್ಠ ಮಟ್ಟ ದಾಖಲಿಸಬಹುದೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ. ಬ್ಲೂಂಬರ್ಗ್ ಸರ್ವೆಯ ಪ್ರಕಾರ ಇನ್‌ವೆಂಟರಿ ದಾಸ್ತಾನು 18 ಶೇಕಡಾ ಇಳಿಕೆಯಾಗಿ 1.75 ಮಿಲಿಯನ್ ಗಳಿಗಿಳಿಯಲಿದೆಯೆನ್ನಲಾಗಿದೆ. ಜೂನ್ ತಿಂಗಳ ನಂತರದ ಕನಿಷ್ಠ ಮಟ್ಟ ಹಾಗೂ ಡಿಸೆಂಬರ್ 2020 ನಂತರದ ಅತಿ ದೊಡ್ಡ ತಿಂಗಳ ದಾಸ್ತಾನು ಕುಸಿತವಾಗಬಹುದೆನ್ನಲಾಗಿದೆ. ರಫ್ತು 25 ಶೇಕಡಾ ಹೆಚ್ಚಳದೊಂದಿಗೆ 1.39 ಮಿಲಿಯನ್ ಗಳಾಗಬಹುದೆಂದು ಸರ್ವೆ ಅಂದಾಜಿಸಿದೆ. ಕಚ್ಚಾ ಪಾಮೆಣ್ಣೆ ಉತ್ಪಾದನೆ 1 ಶೇಕಡಾ ಇಳಿಕೆಯೊಂದಿಗೆ 1.24 ಮಿಲಿಯನ್ ಟನ್‌ಗಳಿಗಿಳಿದು, ಮೇ 2022 ರ ನಂತರದ ಕನಿಷ್ಠ ಮಟ್ಟವಾಗಲಿದೆಯೆನ್ನಲಾಗಿದೆ. ಇಂಡೋನೇಶಿಯಾದ ರಫ್ತು ಕಡಿತದಿಂದ ಮಲೇಶಿಯಾದ ರಫ್ತು ಹೆಚ್ಚಳವಾಗಿದೆಯೆನ್ನಲಾಗಿದೆ.

## ಅರಿಸಿನ ದೇಶೀ ರಫ್ತು ದರ ಇಳಿಕೆ

ಹೊಸ ಬೆಳೆಯ ಕಟಾವಿನ ಆವಕ ಹೆಚ್ಚಳ, ಕುಸಿತ ರಫ್ತು, ದೇಶೀ ಬೇಡಿಕೆಯಿಂದ ಅರಸಿನ ದರ ಇಳಿಕೆಯಾಗಿದೆಯೆನ್ನಲಾಗಿದೆ. ರಫ್ತು ಬೇಡಿಕೆ ಹೆಚ್ಚಳ ಶುರುವಾಗುತ್ತಿದ್ದು ದರ ಸ್ವಲ್ಪ ಮಟ್ಟಿಗೆ ಹೆಚ್ಚಳ ಕಂಡಿದೆ. ದರ ಕುಸಿತದ ಭಯದಿಂದ ರೈತರು ಹಾಗೂ ದಾಸ್ತಾನುದಾರರು ತಮ್ಮಲ್ಲಿರುವ ದಾಸ್ತಾನು ಬಿಡುಗಡೆಗೊಳಿಸುತ್ತಿದ್ದಾರೆನ್ನಲಾಗಿದೆ. ಇದರಿಂದ ಆಂಧ್ರದ ಪ್ರಮುಖ ಮಾರುಕಟ್ಟೆಯಾದ ನಿಜಾಮಾಬಾದ್‌ಗೆ ದಿನವಹಿ 5000 ದಿಂದ 7000 ಚೀಲ , ಈರೋಡ್ ಮಾರುಕಟ್ಟೆಗೆ 400 ರಿಂದ 600 ಚೀಲ , ಸಾಂಗ್ಲಿ ಮಾರುಕಟ್ಟೆಗೆ 3500 ರಿಂದ 7000 ಚೀಲ ಅರಸಿನ ಆವಕವಾಗುತ್ತಿದೆಯೆನ್ನಲಾಗಿದೆ. 2022 ಎಪ್ರಿಲ್‌ನಿಂದ 2023 ಜನವರಿ ತನಕದ ಅರಸಿನ ರಫ್ತು 7.76 ಶೇಕಡಾ ಹೆಚ್ಚಳವಾಗಿ 1,36,492.59 ಟನ್‌ಗಳಾಗಿವೆಯೆನ್ನಲಾಗಿದೆ. 2021 ಎಪ್ರಿಲ್‌ನಿಂದ 2022 ಜನವರಿ ಅವಧಿಯ ರಫ್ತು 1,26,659 ಟನ್ ಗಳಾಗಿತ್ತೆನ್ನಲಾಗಿದೆ. ಉತ್ಪಾದನೆ 18.4 ಶೇಕಡಾ ಹೆಚ್ಚಳದೊಂದಿಗೆ 1.33 ಮಿಲಿಯನ್ ಟನ್‌ಗಳಾಗಬಹುದೆಂದು ಸ್ಪೈಸಸ್ ಬೋರ್ಡ್ ಅಂದಾಜಿಸಿದೆಯೆನ್ನಲಾಗಿದೆ.

## ಬಿಹಾರದ ಮಾರ್ಚ್ ಅಕ್ಕಿಗೆ ಭೌಗೋಳಿಕ ಗುರುತು(GI)

ಬಿಹಾರ ಚಂಪಾರನ್ ಪ್ರದೇಶದಲ್ಲಿ ಬೆಳೆಯುವ ಕಾಳುಮೆಣಸಿನಾಕಾರದ ಮಾರ್ಚ್ ಅಕ್ಕಿಗೆ (ಸುಗಂಧಿತ ಅಕ್ಕಿ) ಭೌಗೋಳಿಕ (GI TAG) ಪತ್ರ ಲಭಿಸಿದೆಯೆನ್ನಲಾಗಿದೆ. ಇದರಿಂದ ಈ ತಳಿಯ ಅಕ್ಕಿ ಬೆಳೆಯುವ ರೈತರಿಗೆ ಅನುಕೂಲವಾಗಲಿದೆಯೆನ್ನಲಾಗಿದೆ.